ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 27/02/2020

# ತಾಂತ್ರಿಕ ಜವಳಿ ಮಿಷನ್‌ಗೆ ಸಂಪುಟ ಅಸ್ತು

**ನವದೆಹಲಿ:** ತಾಂತ್ರಿಕವಾಗಿ ಬಟ್ಟೆ ತಯಾರಿಕೆಯಲ್ಲಿ ಭಾರತವನ್ನು ಪ್ರಮುಖ ಸ್ಥಾನಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಕೇಂದ್ರ ಸಚಿವ ಸಂಪುಟ ₹ 1,480 ಕೋಟಿ ವಿನಿಯೋಗದೊಂದಿಗೆ ರಾಷ್ಟ್ರೀಯ ತಾಂತ್ರಿಕ ಜವಳಿ ಮಿಷನ್‌ಗೆ ಬುಧವಾರ ಅನುಮೋದನೆ ನೀಡಿದೆ.

2020-21ರಿಂದ 2023-24ರವರೆಗೆ ಈ ಮಿಷನ್ ಅನುಷ್ಠಾನಗೊಳ್ಳಲಿದೆ. ತಾಂತ್ರಿಕ ಜವಳಿಗಳ ಬಳಕೆಯಿಂದ ಕೃಷಿ, ತೋಟಗಾರಿಕೆ ಮತ್ತು ಜಲಚರ ಸಾಕಣೆ ಕ್ಷೇತ್ರಗಳಲ್ಲಿ ಉತ್ಪಾದಕತೆ ಹೆಚ್ಚಲಿದೆ. ಕೃಷಿ, ವೈದ್ಯಕೀಯ, ರಕ್ಷಣೆ, ಕೈಗಾರಿಕೆ, ಕ್ರೀಡೆ ಸೇರಿ ಅವಶ್ಯಕತೆಗೆ ಅನುಗುಣವಾಗಿ ವಿವಿಧ ಕ್ಷೇತ್ರಗಳಲಿ ಈ ಜವಳಿ ಬಳಸಲಾಗುತ್ತದೆ ಎಂದು ಸಂಪುಟ ಸಭೆಯ ನಂತರ ಜವಳಿ ಸಚಿವೆ ಸ್ಮೃತಿ ಇರಾನಿ ತಿಳಿಸಿದರು.

» **₹ 1,480 ಕೋಟಿ ವಿನಿಯೋಗ**

» **ಬಾಡಿಗೆ ತಾಯ್ತನ ಕುರಿತ ತಿದ್ದುಪಡಿ ಮಸೂದೆಗೆ ಸಮ್ಮತಿ**

**ಬಾಡಿಗೆ ತಾಯ್ತನದ 15 ಶಿಫಾರಸಿಗೆ ಒಪ್ಪಿಗೆ:** ಬಾಡಿಗೆ ತಾಯ್ತನ ಕುರಿತ ತಿದ್ದುಪಡಿ ಮಸೂದೆಗೆ ರಾಜ್ಯಸಭೆಯ 23 ಸದಸ್ಯರ ಆಯ್ಕೆ ಸಮಿತಿ ಮಾಡಿದ 15 ಶಿಫಾರಸಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟ ಸಮ್ಮತಿಸಿದೆ.

ನಿಕಟ ಸಂಬಂಧಿ ಮಹಿಳೆಯರಿಗೆ ಮಾತ್ರ ಬಾಡಿಗೆ ತಾಯ್ತನದ ಅವಕಾಶ ಇರಬೇಕು ಎಂಬ ತಿದ್ದುಪಡಿಗೆ ಮಾರ್ಪಾಟು ಸೂಚಿಸಿರುವ ಆಯ್ಕೆ ಸಮಿತಿ, ಇಚ್ಛೆ ಪಡುವ ಎಲ್ಲ ಮಹಿಳೆಯರಿಗೂ ಬಾಡಿಗೆ ತಾಯ್ತನ ಹೊಂದಲು ಅವಕಾಶ ಕಲ್ಪಿಸಬೇಕು ಎಂಬ ಶಿಫಾರಸು ಅತಿ ಮುಖ್ಯವಾದುದ್ದಾಗಿದೆ.

ನೂತನ ಕೇಂದ್ರಾಡಳಿತ ಪ್ರದೇಶವಾದ ಜಮ್ಮು-ಕಾಶ್ಮೀರದಲ್ಲಿ ಕೇಂದ್ರದ ಕಾನೂನು ಗಳನ್ನು ಸಮವರ್ತಿ ಪಟ್ಟಿಗೆ ಸೇರಿಸುವುದಕ್ಕೂ ಸಂಪುಟ ಅನುಮೋದನೆ ನೀಡಿದೆ.

ಹರಿಯಾಣದ ಕುಂಡ್ಲಿ ಮತ್ತು ತಮಿಳುನಾಡಿನ ತಂಜಾವೂರಿನಲ್ಲಿರುವ ರಾಷ್ಟ್ರೀಯ ಆಹಾರ ತಂತ್ರಜ್ಞಾನ ಸಂಸ್ಥೆಗಳಿಗೆ ರಾಷ್ಟ್ರೀಯ ಸಂಸ್ಥೆಗಳ ಸ್ಥಾನಮಾನ ನೀಡುವ ಪ್ರಸ್ತಾವವನ್ನು ಸಂಪುಟ ಅಂಗೀಕರಿಸಿದೆ.